ಹುಕ್ಕೇರಿ ತಾಲ್ಲೂಕಿನ ಗೋಡಗೇರಿ, ನೊಗಿನಾಳ್ ಮಧ್ಯೆ ಹಿರಣ್ಯಕೇಶಿ ನದಿಗೆ ಸೇತುವೆ

2246: ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ಮತ್ತು ನೊಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಹಿರಣ್ಯಕೇಶಿ ನದಿಗೆ ಸೇತುವೆ ಇಲ್ಲದಿರುವುದರಿಂದ 20–25 ಕಿ.ಮೀ. ಸುತ್ತುವರೆದು ಬರುವ ವಿಚಾರವು ಸರ್ಕಾರಕ್ಕೆ ತಿಳಿದಿದೆಯೇ;

ಆ) ಗೋಡಗೇರಿ, ನೊಗಿನಾಳ್ ಮತ್ತು ಹುಕ್ಕೇರಿ ನಡುವೆ ಬರುವ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ಕೇವಲ 5 ಕಿಮೀ. ದೂರ ತಾಲ್ಲೂಕು ಕೇಂದ್ರವಾಗುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಸಾರ್ವಜನಿಕರು ಅನುಭವಿಸುತ್ತಿರುವ ಕಷ್ಟವನ್ನು ನಿವಾರಿಸಲು ಹಿರಣ್ಯಕೇಶಿ ನದಿಗೆ ಅಡ್ಡವಾಗಿ ಸೇತುವೆ ಕಟ್ಟುವ ವಿಚಾರವೇನಾದರೂ ಇದೆಯೇ;

ಈ) ಇದ್ದಾಗ ಯಾವಾಗ ಕಟ್ಟುವಿರಿ ಮತ್ತು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸುವಿರಿ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಗೋಡಗೇರಿ ನೋಗಿನಾಳ ಗ್ರಾಮದ ಜನರು ತಾಲ್ಲೂಕು ಕೇಂದ್ರಕ್ಕೆ ಬರಬೇಕಾದರೆ ಘಟಪ್ರಭಾ ನದಿಗೆ ಸೇತುವೆ ಇಲ್ಲದಿರುವುದರಿಂದ 21 ಕಿಮೀ ಸುತ್ತುವರೆದು ಬರಬೇಕಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಗೋಡಗೇರಿ ನೋಗಿನಾಳ ಮತ್ತು ಹುಕ್ಕೇರಿ ನಡುವೆ ಬರುವ ಘಟಪ್ರಭಾ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸಿದರೆ ತಾಲ್ಲೂಕು ಕೇಂದ್ರಕ್ಕೆ ಬರಲು ಸುಮಾರು 10.00 ಕಿಮೀ.ಗಳಷ್ಟು ದೂರ ಕಡಿಮೆ ಆಗುವುದು.

ಇ) ಪ್ರಸ್ತಾಪವಿರುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಕ್ಕೇರಿ ಪಟ್ಟಣದಲ್ಲಿ ಬೈಪಾಸ್ ರಸ್ತೆ ನಿರ್ಮಾಣ

2248:– ಶ್ರೀ ಉಮೇಶ. ವಿ.ಕತ್ತಿ (ಹುಕ್ಕೇರಿ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹುಕ್ಕೇರಿ ಪಟ್ಟಣದಲ್ಲಿ ಜನಸಂಖ್ಯೆ ಅಧಿಕವಿರುವ ಸಂಗತಿಯು ಸರ್ಕರಕ್ಕೆ ತಿಳಿದಿದೆಯೇ ? ಇಲ್ಲಿನ ಮುಖ್ಯ ರಸ್ತೆ ಊರ ಮಧ್ಯದಲ್ಲಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಸಂಗತಿ ನಿಜವೇ;

ಆ) ಹಾಗಿದ್ದಲ್ಲಿ ಊರ ಹೊರಗಡೆ ಪರ್ಯಾಯ ರಸ್ತೆ (ಬೈಪಾಸ್ ರಸ್ತೆ) ನಿರ್ಮಾಣ ಮಾಡುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ;